**ಅಸಲು ದಾವಾ ನಂ:66/2018**
**ಪಿ.ಡಬ್ಲ್ಯೂ-01/ಸೀನಾನಾಯ್ಕ**

**ದಿನಾಂಕ: 05.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., ಪ್ರತಿವಾದಿಯವರ ಪರ ವಕೀಲರಿಂದ**

6. ತಿಪ್ಪಮ್ಮ ಮನೆಕಟ್ಟಿಕೊಂಡಿರುವ ಪೂರ್ವ ದಿಕ್ಕಿಗೆ ರಾಂಜೀನಾಯ್ಕರವರ ಮಗ ಮಂಜುನಾಯ್ಕರವರ ಮನೆ ಇರುತ್ತದೆ ಎಂದರೆ ಸರಿ. ತಿಪ್ಪಮ್ಮ ಮನೆಕಟ್ಟಿಕೊಂಡಿರುವ ಪೂರ್ವದಲ್ಲಿ ತಿಪ್ಪಮ್ಮನಿಗೆ ಸೇರಿದ ಮಣ್ಣಿನ ಹಳೇಯ ಮನೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮನೆಯನ್ನು ಹೊಸದಾಗಿ ಕಟ್ಟಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.5 ಮತ್ತು 6 ರ ಎಡಭಾಗದಲ್ಲಿ ಬಿದ್ದಿರುವ ಮಣ್ಣಿನ ಗೋಡೆಯು ರಾಂಜೀನಾಯ್ಕರವರ ಹಳೇಯ ಮನೆ ಗೋಡೆ ಆಗಿರುತ್ತದೆ ಎಂದರೆ ಸರಿ. ನಿ.ಪಿ.5 ಮತ್ತು 6 ರ ಎಡಭಾಗದಲ್ಲಿ ಕಾಣಿಸುವ ರಾಂಜೀನಾಯ್ಕನ ಹಳೇಯ ಮನೆಯ ಗೋಡೆಯು ಮತ್ತು ತಿಪ್ಪಮ್ಮನ ಹಳೇಯ ಮನೆಯ ಗೋಡೆಯು ಪೂರ್ವ ದಿಕ್ಕಿನಲ್ಲಿ ಜಂಟೀಯಾಗಿದ್ದವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಿಪ್ಪಮ್ಮನಿಗೆ ಸೇರಿದ ಮನೆಯಲ್ಲಿ ನಾನು ಇದ್ದು ಅದು ತಿಪ್ಪಮ್ಮನಿಗೆ ಸೇರಿಲ್ಲ ಎಂದು ನುಡಿಯುತ್ತಾರೆ. ತಿಪ್ಪಮ್ಮನಿಗೆ ಸೇರಿದ ಹಳೇಯ ಮನೆ ಮತ್ತು ಅದೇ ಸಾಲಿನಲ್ಲಿ ಬರುವ 4 ಮನೆಗಳು ಗ್ರಾಮ ಠಾಣಾಕ್ಕೆ ಸೇರಿರಲಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಸೇರಿದ್ದು, ಆದರೆ ಗ್ರಾಮ ಠಾಣೆಗೆ ಸೇರಿರಲಿಲ್ಲ ಎಂದು ನುಡಿಯುತ್ತಾರೆ. ತಿಪ್ಪಮ್ಮ ಈಗ ಕಟ್ಟಿಸಿಕೊಂಡಿರುವ ಮನೆಯ ಜಾಗವು ನನಗೆ ಸೇರಿರುತ್ತದೆ ಅಂತ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

7. ನಿ.ಡಿ.1 ರಲ್ಲಿ ಕಾಣಿಸುವ ಮನೆಯು ರಾಂಜೀನಾಯ್ಕನಿಗೆ ಸೇರಿರುತ್ತದೆ ಎಂದರೆ ಸರಿ. ರಾಂಜೀನಾಯ್ಕನ ಮನೆಯ ಪಶ್ಚಿಮ ದಿಕ್ಕಿಗೆ ತಿಪ್ಪಮ್ಮ ಕಟ್ಟಿಸಿರುವ ನಿ.ಡಿ.2 ರ ಹೊಸ ಮನೆ ಬರುತ್ತದೆ ಎಂದರೆ ಸರಿ. ನಿ.ಡಿ.2 ರ ಹೊಸ ಮನೆಯನ್ನು ತಿಪ್ಪಮ್ಮ ಪಂಚಾಯಿತಿಯಿಂದ ಸಾಲ ತೆಗೆದುಕೊಂಡು ಅದರ ಭದ್ರತೆಗಾಗಿ ಮನೆಯನ್ನು ಅಡಮಾನ ಮಾಡಿ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಲ ತೆಗೆದುಕೊಂಡ ಕುರಿತು ಮನೆಯ ಮುಂದಿನ ಗೋಡೆಯ ಮೇಲೆ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ತಿಪ್ಪಮ್ಮ ಪಂಚಾಯಿತಿಯಿಂದ ಸಾಲ ತೆಗೆದುಕೊಳ್ಳುವಾಗ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ತಕರಾರು ಮಾಡಿರುತ್ತೇನೆ ಅಂತ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಮೇಲೆ ಹೇಳಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ರಲ್ಲಿ ಕಾಣಿಸುವ ಖಾಲಿ ಜಾಗದಲ್ಲಿ ಈಗ ನೋಡುತ್ತಿರುವ ಛಾಯ ಚಿತ್ರಗಳಲ್ಲಿ ಕಾಣಿಸುತ್ತಿರುವಂತೆ 4 ನೇ ಪ್ರತಿವಾದಿ ತಿಪ್ಪಮ್ಮ ಮನೆಕಟ್ಟಲು ಬೆಸ್ಮೆಂಟ್ ಹಾಕಿರುತ್ತಾಳೆ ಎಂದರೆ ಸಾಕ್ಷಿಯು ಇತ್ತೀಚಿಗೆ ಹಾಕಿರುತ್ತಾಳೆ ಎಂದು ನುಡಿಯುತ್ತಾರೆ. ಸಾಕ್ಷಿಯು ಬೆಸ್ಮೆಂಟ್ ಇರುವ

ಎರಡು ಛಾಯ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿ.ಡಿ.5 ಮತ್ತು 6 ಅಂತ ಗುರುತಿಸಲಾಯಿತು. ನಿ.ಡಿ.5 ಮತ್ತು 6 ರಲ್ಲಿ ಕಾಣಿಸುತ್ತಿರುವ ಬೆಸ್ಮೆಂಟ್ ದ ಮೇಲೆ ನಿ.ಡಿ.2 ರಲ್ಲಿ ಕಾಣಿಸುವ ಮನೆಯನ್ನು ತಿಪ್ಪಮ್ಮ ಕಟ್ಟಿಸಿರುತ್ತಾಳೆ ಎಂದರೆ ಸರಿ.

8. ತಿಪ್ಪಮ್ಮ ಆರ್ಥಿಕವಾಗಿ ಚನ್ನಾಗಿ ಇಲ್ಲದಿರುವ ಕಾರಣಕ್ಕೆ ಪಂಚಾಯಿತಿಯಿಂದ ಸಾಲ ಮಾಡಿ ಮನೆಯನ್ನು ಕಟ್ಟಿಸಿರುತ್ತಾಳೆ ಎಂದರೆ ಸರಿಯಲ್ಲ. ನಿ.ಡಿ.2 ರ ಮನೆಗೆ ತಿಪ್ಪಮ್ಮ ಕಂದಾಯವನ್ನು ಕಟ್ಟಿಕೊಂಡು ಹೋಗುತ್ತಿದ್ದಾಳೆ ಎಂದರೆ ಸಾಕ್ಷಿಯು ಇತ್ತೀಚೆಗೆ ಮನೆಕಟ್ಟಿಕೊಂಡ ನಂತರ ಕಟ್ಟುತ್ತಿದ್ದಾಳೆ ಎಂದು ನುಡಿಯುತ್ತಾರೆ. ತಿಪ್ಪಮ್ಮನ ಮನೆಗೆ ವಿದ್ಯುತ್ ಸೌಲಭ್ಯ ಇರುತ್ತದೆ ಎಂದರೆ ಸರಿ, ಸಾಕ್ಷಿಯು ಇತ್ತೀಚೆಗೆ ವಿದ್ಯುತ್ ಸೌಲಭ್ಯ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ತಿಪ್ಪಮ್ಮನ ಹಳೇಯ ಮನೆಗೂ ವಿದ್ಯುತ್ ಸೌಲಭ್ಯ ಇತ್ತು ಎಂದರೆ ಸಾಕ್ಷಿಯು ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ವಿದ್ಯುತ್ ಸಂರ್ಪಕ ಇತ್ತು ಎಂದು ನುಡಿಯುತ್ತಾರೆ. ತಿಪ್ಪಮ್ಮನ ಮನೆಗೆ ಪಂಚಾಯಿತಿಯವರು ಖಾತೆ ನಂ.253 ಅಂತ ನೀಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಆದರೆ ಇತ್ತೀಚೆಗೆ ಖಾತೆ ಸಂಖ್ಯೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

9. ನಿ.ಪಿ.1 ರ ದಾಖಲೆ 2017-18 ಖಾತೆ ನಂ.267 ಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿದ್ದು, ನಾನು 2017-18 ರ ಪೂರ್ವದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆಗೆಲ್ಲ ಚೆನ್ನಾಗಿ ವಾಸಿಸುತ್ತಿದ್ದೇವು, ಆದ್ದರಿಂದ ಹಾಜರುಪಡಿಸುವಂತಹ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

10. ನನ್ನ ತಂದೆ ಸೋಮ್ಲಾನಾಯ್ಕ ಈಗ ಜೀವಂತ ಇರುವುದಿಲ್ಲ. ಅವರು ತೀರಿಕೊಂಡು ಸುಮಾರು 10 ವರ್ಷಗಳಾಗಿರಬಹುದು. ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.3, ಖಾತೆ ನಂ.267 ನೇದ್ದನ್ನು 2004-05 ನೇ ಸಾಲಿಗೆ ಸಂಬಂಧಿಸಿದ್ದು ಅದಕ್ಕೆ ಪೂರ್ವದ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಅದೇ ರೀತಿ 2004-05 ನೇ ಸಾಲಿನ ನಂತರದ ವರ್ಷಗಳ ದಾಖಲೆಗಳನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ದಾವಾ ದಾಖಲಿಸುವ ಕಾಲಕ್ಕೆ ನನಗೆ ಸೇರಿರುತ್ತದೆ ಅಂತ ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಪುನಃ ಮುಂದುವರೆದು ನನ್ನ ತಂದೆ ಹೆಸರಿಗೆ ಸೇರಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಹೆಸರಿಗೆ ಸೇರಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

11. ನನಗೆ ಒಟ್ಟು 5 ಜನ ಸಹೋದರರು. ನನ್ನ ತಾಯಿ ತೀರಿಕೊಂಡು ಸುಮಾರು 5 ವರ್ಷಗಳಾಗಿರುತ್ತವೆ. ಮೊದಲು ನನ್ನ ತಂದೆ ತೀರಿಕೊಂಡು ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಪಟ್ಟಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ತೀರಿಕೊಂಡ ನಂತರವು ಸಹ ನಾವು 5 ಜನ ಸಹೋದರರು ಖಾತೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿ. ನನ್ನ ಎಲ್ಲ ಸಹೋದರರು ಈ ದಾವೆಯಲ್ಲಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರರನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ಅಸ್ತಿತ್ವದಲ್ಲಿ ಇಲ್ಲದಿರುವ ಆಸ್ತಿಗೆ ಸಂಬಂಧಿಸಿದಂತೆ ನಾನು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ತಿಪ್ಪಮ್ಮನ ಗಂಡನಾದ ಯುವರಾಜನಾಯ್ಕನಿಗೆ ಸೇರಿದ ಮನೆಯನ್ನು ಅಕ್ರಮವಾಗಿ ಲಪಟಾಯಿಸಬೇಕೆಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಯ ಪಶ್ಚಿಮ ದಿಕ್ಕಿನಲ್ಲಿ ಭೀಮಾನಾಯ್ಕನ ಮನೆ ಅಂತ ತೋರಿಸಿದ್ದು, ಅದರ ಖಾತೆ ನಂಬರ್ ನನಗೆ ಹೇಳಲು ಬರುವುದಿಲ್ಲ, ಕಾರಣ ಅವರ ಮಾರಾಟ ಮಾಡಿರುತ್ತಾರೆ. ಅದೇ ರೀತಿ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ರಾಂಜೀನಾಯ್ಕ ಮತ್ತು ರಾಮನಾಯ್ಕ ಇವರ ಮನೆಗಳ ಖಾತೆ ನಂಬರ್ ಹೇಳಲು ನನಗೆ ಬರುವುದಿಲ್ಲ.

13. ತಿಪ್ಪಮ್ಮ ಕಟ್ಟಿಸಿಕೊಂಡಿರುವ ಎದುರುದಾವಾ ಸ್ವತ್ತಿನ ಮನೆಗೆ ಅವಳೇ ಹಕ್ಕುದಾರಳು, ಸ್ವಾಧೀನದಾರಳು ಮತ್ತು ಮಾಲೀಕದಾರಳು ಎಂದರೆ ಸರಿಯಲ್ಲ. ತಿಪ್ಪಮ್ಮ ಕಟ್ಟಿಸಿಕೊಂಡಿರುವ ಮನೆ ಮತ್ತು ಅದರ ಜಾಗಕ್ಕೆ ಅವರನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ತಿಪ್ಪಮ್ಮನ ಜಾಗಕ್ಕೆ ಸಂಬಂಧಿಸಿರುವ ಛಾಯ ಚಿತ್ರಗಳನ್ನು ಹಾಜರುಪಡಿಸಿ ಅವುಗಳು ನನ್ನ ಜಾಗಕ್ಕೆ ಸಂಬಂಧಿಸಿರುತ್ತವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜನವರಿ 2021 ನೇ ಸಾಲಿನಲ್ಲಿ ಎದುರು ದಾವಾ ಸ್ವತ್ತಿನಲ್ಲಿ ನಾನು ತಿಪ್ಪಮ್ಮನಿಗೆ ತಂಟೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಿಪ್ಪಮ್ಮಳ ಸ್ವಾಧೀನಕ್ಕೆ ತೊಂದರೆ ಮಾಡಿದ್ದಕ್ಕೆ ನನ್ನ ವಿರುದ್ಧ ಎದುರುದಾವೆ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ತಿಪ್ಪಮ್ಮ ಸಾಲ ತೆಗೆದುಕೊಳ್ಳಲು ಮನೆಯನ್ನು ಅಡಮಾನ ಮಾಡಿದ ಕುರಿತು ಅಡಮಾನ ಪತ್ರ ಚಳ್ಳಕೆರೆ ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ದಿನಾಂಕ.15.03.2018 ರಂದು ನೋಂದಾಣಿಯಾಗಿರುತ್ತದೆ ಎಂದರೆ ಸಾಕ್ಷಿಯು ಇತ್ತೀಚೆಗೆ ಮಾಡಿಸಿಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ಅಡಮಾನ ಪತ್ರವನ್ನು ನಾನು ರದ್ದುಪಡಿಸಲು ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ತಿಪ್ಪಮ್ಮ ಕಟ್ಟಿಸಿರುವ ಜಾಗವು ಅವಳ ಗಂಡ ಯುವರಾಜನಾಯ್ಕನಿಗೆ ಸೇರಿದ್ದು, ಇತ್ತೀಚೆಗೆ ಅದರಲ್ಲಿ ತಿಪ್ಪಮ್ಮ ಹೊಸದಾಗಿ ಮನೆಕಟ್ಟಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಯುವರಾಜನಾಯ್ಕ ಜೀವಂತ ಇದ್ದಾಗ ತನ್ನ ಹೆಂಡತಿ ಮಕ್ಕಳೊಂದಿಗೆ ಈಗ ಕಟ್ಟಿಸಿರುವ ಮನೆಯ ಜಾಗದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ನಾನು ವಾಸವಾಗಿದ್ದೆ ಎಂದು ನುಡಿಯುತ್ತಾರೆ. ಯುವರಾಜನಾಯ್ಕ ತೀರಿಕೊಂಡ ನಂತರ ತಿಪ್ಪಮ್ಮನ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.